## 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
## ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ:** 5045/2024 ಪ್ರಾಸಾ-07
ಚಾಸಾ-14

ದಿನಾಂಕಃ 17-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ರವಿ ಎಂ. |
| **ತಂದೆಯ / ಗಂಡನ ಹೆಸರು** | ಮುತ್ತರಾಯಪ್ಪ |
| **ವಯಸ್ಸು** | 35 |
| **ಉದ್ಯೋಗ** | ಪಿ.ಸಿ.580, ಕೊರಟಗೆರೆ ಪೊಲೀಸ್ ಠಾಣೆ |
| **ವಾಸಸ್ಥಳ** | ಕೊರಟಗೆರೆ |

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-</u>**

**ನಾನು 2022 ಡಿಸೆಂಬರ್ ರಿಂದ ಇಲ್ಲಿಯವರೆಗೂ ಕೊರಟಗೆರೆ ಪೊಲೀಸ್ ಠಾಣೆಯಲ್ಲಿ ಪಿ.ಸಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.**

ದಿ. 23.05.2024 ರಂದು ಕೊರಟಗೆರೆ ತಾಲ್ಲೂಕು , ಹೊಳವನಹಳ್ಳಿ ಹೋಬಳಿ , ಬೈರೇನಹಳ್ಳಿ ಕ್ರಾಸ್ ಬಳಿ ಇರುವ ಎಂ. ನವೀನ್ ಕುಮಾರ್ ರವರ ಬಾಬ್ತು ಎನ್.ಟಿ. ಆರ್ ಕಂಪರ್ಟ್ ಬಾರ್ ಅಂಡ್ ರೆಸ್ಟೂರೆಂಟ್ ನ ಪೂರ್ವದ ಕಡೆ ಇರುವ ರೊಲಿಂಗ್ ಸೆಂಟರ್ ಮುಂಭಾಗದಲ್ಲಿ ಚಾಸಾ-17 ರವರು ಉಕ್ತಲೇಖನದಂತೆ ನಿಪಿ-2 ಪಂಚನಾಮೆಯನ್ನು ಬೆರಳಚ್ಚು ಮಾಡಿ ಪ್ರಿಂಟ್ ತೆಗೆದಿರುತ್ತೇನೆ. ನಿಪಿ-2 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ನಿಪಿ-3 ರಿಂದ 6 ರಂತೆ ಪೊಟೋ ತೆಗೆದಿರುತ್ತಾರೆ.

ಚಾಸಾ-14

**<u>ಪಾಟೀಸವಾಲು ಶ್ರೀ. ಬಿ.ಕೆ.ಬಿ. ವಕೀಲರಿಂದ 1 ನೇ ಆರೋಪಿ ಪರವಾಗಿಃ-</u>**

ಆ ದಿನ ಸದಳದಲ್ಲಿ ಪಂಚರಾದ ಅನಿಲ್ ಕುಮಾರ್ , ಅಶ್ವಥನಾರಾಯಣ್ , ತನಿಖಾಧಿಕಾರಿ ಮಂಜುನಾಥ, ಪಿರ್ಯಾದಿ ಗೋವಿಂದರಾಜು ಮತ್ತು ರಂಗರಾಜು ಹಾಜರಿದ್ದರು. ಪಂಚನಾಮೆಯನ್ನು ಮದ್ಯಾಹ್ಷ 1-30 ರಿಂದ 2-30 ಗಂಟೆಯವರೆಗೆ ಮಾಡಿರುತ್ತಾರೆ. ನಿಪಿ-2 ನ್ನು ಠಾಣೆಯಲ್ಲಿ ತಯಾರು ಮಾಡಿರುವ ದಾಖಲೆ ಎಂದರೆ ಸರಿಯಲ್ಲ.

**<u>ಪಾಟೀಸವಾಲು ಶ್ರೀ. ಕೆ.ಕೆ. ವಕೀಲರು 1 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು 2 ರಿಂದ 5 ನೇ ಆರೋಪಿತರ ಪರವಾಗಿ ಅಳವಡಿಸಿಕೊಳ್ಳಲು ಕೋರಿದ್ದು ಅಳವಡಿಸಿಕೊಳ್ಳಲಾಯಿತು</u>**

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**